## ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

## ಸಿ.ಸಿ. ನಂ॰ 574 /2023

| | | | |
|---|---|---|---|
| ಸಾಕ್ಷಿಯ ಹೆಸರು | ॰ ಕಮಲಮ್ಮ | ಸಿ.ಡಬ್ಲ್ಯೂ | ॰ 1 |
| ಗಂಡ ನ ಹೆಸರು | ॰ ಚಂದ್ರೇಗೌಡ | ಪಿ.ಡಬ್ಲ್ಯೂ | ॰ 4 |
| ವಯಸ್ಸು | ॰ 45 ವರ್ಷ | ಪ್ರಮಾಣೀಕರಿಸಿದ ದಿ॰ 28/05/2025 | |
| ವೃತ್ತಿ | ॰ ಗೃಹಿಣಿ | | |
| ವಾಸ | ॰ ಕೋರನಹಳ್ಳಿ ಗ್ರಾಮ, ಶ್ರವಣಬೆಳಗೊಳ | | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ:- ಮಾನ್ಯ ಎ.ಪಿ.ಪಿ.ಯವರಿಂದ॰

ಈ ಪ್ರಕರಣದ ಬಗ್ಗೆ ನನಗೆ ಏನು ತಿಳಿದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯು ನನ್ನ ತಂಗಿ ಗಂಡನಾಗಿರುತ್ತಾನೆ. ಈ ಪ್ರಕರಣದ ಬಗ್ಗೆ ನಾನು ಆರೋಪಿಯ ವಿರುದ್ದ ದೂರನ್ನು ನೀಡಿದ್ದೀನಾ ಇಲ್ಲವಾ ನನಗೆ ಗೊತ್ತಿಲ್ಲ. ನಾನು ವಿವಾದಿತ ಆಪಘಾತದ ಬಗ್ಗೆ ನಾನು ಯಾವುದಾದರೂ ಮಹಜರ್ ಗೆ ಸಹಿ ಮಾಡಿದ್ದೀನಾ ಎಂದು ನನಗೆ ಗೊತ್ತಿಲ್ಲ. ಸದರಿ ದೂರನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ಅವರು ಅವರ ಸಹಿಯನ್ನು ಗುರುತಿಸಿದ್ದರಿಂದ ದೂರನ್ನು ನಿ ಪಿ 5 ಎಂದು ಸಹಿಯನ್ನು ನಿ ಪಿ 5 (ಎ) ಎಂದು ಗುರುತಿಸಲಾಯಿತು. ನಿ ಪಿ -3 ನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ಅವರು ತಮ್ಮ ಸಹಿಯನ್ನು ಅವರು ಗುರುತಿಸಿದ್ದರಿಂದ ಸಹಿಯನ್ನು ನಿ ಪಿ -3 (ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಸ್ಥಳ ಮಹಜರ್ ನ ಛಾಯಚಿತ್ರ ನಿ ಪಿ 4 ನ್ನು ತೋರಿಸಲಾಗಿ ಅದರಲ್ಲಿ ತಮ್ಮನ್ನು ಗುರುತಿಸಿರುತ್ತಾರೆ.

(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ದೂರು ಮತ್ತು ಕಲಂ 161 ರ ಹೇಳಿಕೆಯನ್ನು ಪರಿಶೀಲೀಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲು॰ - ಮಾನ್ಯ ಎ.ಪಿ.ಪಿ. ರವರಿಂದ॰

ನಾನು ದಿನಾಂಕ 04.10.2022 ರಂದು ನನ್ನ ತಂಗಿ ಆತನ ಗಂಡನಾದ ಆರೋಪಿಯೊಂದಿಗೆ ಕೆ ಎ 41- ಯು - 5699 ರ ಬೈಕಿನಲ್ಲಿ ಚನ್ನರಾಯಪಟ್ಟಣಕ್ಕೆ ಬರುವಾಗ ಆರೋಪಿಯು ಅತೀ ವೇಗ ಮತ್ತು ಅಜಾಗೂರುಕತೆಯಿಂದ ಬೈಕನ್ನು ಚಲಾಯಿಸಿಕೊಂಡು ಬಂದ ಕಾರಣ ಬೈಕ್ ರಸ್ತೆಯಲ್ಲಿದ್ದ ಗುಂಡಿಯ ಮೇಲೆ ಇಳಿದಿದ್ದು ಪರಿಣಾಮ ಹಿಂಬದಿಯಲ್ಲಿದ್ದ ನನ್ನ ತಂಗಿ ರಸ್ತೆಯಲ್ಲಿ ಬಿದ್ದು ಅವಳಿಗೆ ರಕ್ತಗಾಯಗಳಾಗಿತ್ತು ಎಂದರೆ ಗೊತ್ತಿಲ್ಲ. ನಂತರ ಆರೋಪಿಯು ನನ್ನ ತಂಗಿಯನ್ನು ಸರ್ಕಾರಿ ಆಸ್ಪತ್ರೆ ಹೊಳೆನರಸೀಪುರ ಕ್ಕೆ ಕರೆತಂದರು ಎಂದರೆ ಗೊತ್ತಿಲ್ಲ. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಹಾಸನಕ್ಕೆ ಮತ್ತು ಅಲ್ಲಿಂದ ಆಸ್ಟರ್ ಆರ್ ವಿ ಆಸ್ಪತ್ರೆ ಬೆಂಗಳೂರಿಗೆ

ಕರೆದುಕೊಂಡು ಹೋದರು ಎಂದರೆ ಗೊತ್ತಿಲ್ಲ. ಸದರಿ ಅಪಘಾತದ ಬಗ್ಗೆ ಆರೋಪಿಯ ವಿರುದ್ದ ನಾನು ದಿನಾಂಕ 06.10.2022 ರಂದು ಹೊಳೆನರಸೀಪುರ ಗ್ರಾಮಾಂತರ ಠಾಣೆಯಲ್ಲಿ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 07.10.2022 ರಂದು ಪೊಲೀಸರಿಗೆ ಸ್ಥಳ ಮಹಜರ್ ಮಾಡಲು ನಾನೇ ಸ್ಥಳವನ್ನು, ಜಕ್ಕವಳ್ಳಿ ಹತ್ತಿರ ಹೆಚ್ ಪುರ – ಚನ್ನರಾಯಪಟ್ಟಣ ರಸ್ತೆ ಎಂದು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ, ಚಾ ಸಾ -3 ಮತ್ತು ಚಾ ಸಾ 4 ಸಮಕ್ಷಮ ಪೊಲೀಸರು ಬೆಳಿಗ್ಗೆ 11 ರಿಂದ 11.40 ವರೆಗೆ ಸ್ಥಳ ಪರಿಶಿಲೀಸಿ ಸ್ಥಳ ಪಂಚನಾಮೆ ಮಾಡಿದ್ದರು ಎಂದರೆ ಸರಿಯಲ್ಲ.

2. ಆರೋಪಿಗೆ ನನ್ನ ಮೈದುನನಾದ ಕಾರಣ ಆತನಿಗೆ ಸಹಾಯ ಮಾಡಲು, ನಾನೇ ದೂರು ನೀಡಿ ಸ್ಥಳ ಮಹಜರ್ ಸ್ಥಳವನ್ನು ತೋರಿಸಿದ್ದು, ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ:

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,

ಹೊಳೆನರಸೀಪುರ